THE MYSORE LEGISLATIVE ASSEMBLY

SIXTEENTH DAY.

Friday, 27th March 1953.

The House met in the Assembly Hall, Old Public Offices, Bangalore.

Mr. SPEAKER (Sri H. Siddaiya, B.A., LL.B.), in the Chair.

QUESTIONS AND ANSWERS.

Enforcement of measures relating to Prevention of Animal Sacrifices and other Acts.

Q.—21. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) the Departments to which the enforcement measures relating to Prevention of Cow Slaughter Act, Prevention of Animal Sacrifice Act, Temple Entry Act and Civil Disabilities Removal Act are entrusted for operation ;

(*b*) whether it has come to their notice that even to-day despite the prohibition of animal sacrifice in the presence of God, Goddesses during Jatras, some people are resorting to such sacrifice without a valid licence ;

(*c*) in how many places they have traced such cases and what action has been taken (Districtwar and Talukwar information with the names of villages to be furnished) ?

A.—Sri H. SIDDAVEERAPPA (Minister for Home and Industries).—

(*a*) The Departments entrusted with the administration of the Acts mentioned are as noted below :—

Police Department.—

1. Prevention of Cow Slaughter Act and Prevention of Animal Sacrifice Act.

Muzrai Department.—

2. Temple Entry Act.

Department for the amelioration of Depressed Classes (Commissioner for Local Self-Government).—

3. Civil Disabilities Removal Act.

(*b*) Yes. But prompt action is being taken in all such cases.

(*c*) (1) Mysore District, Hunsur Taluk, Gangenahalli Village, Cr. No. 109—48-49, dated 23rd March 1949 of Hunsur Kasaba Station. The case ended in discharge.

(2) Mysore District, Mysore Taluk, Doddagere Village, Cr. No. 8—53, dated 10th February 1953 of Mysore South Range Station. The case is under investigation.

(3) Chitaldrug District, Hiriyur Taluk, Uppalagere Village, Cr. No. 61—51-52 of Hiriyur Kasaba Station. The case ended in acquittal as the eye-witnesses turned hostile.

(4) Shimoga District, Chennagiri Taluk, Dodderikatte Village, Cr. No. 8—53 of Santhebennur Range Station. All the three accused persons were convicted and sentenced to pay a fine of Rs. 25 each, in default to undergo ten days ; simple imprisonment by the Special Second Class Magistrate, Shimoga.

ಶ್ರೀ ಟಿ. ಹನುಮಯ್ಯ.—(ಎ) ಪ್ರಶ್ನೆಗೆ ಉತ್ತರದಲ್ಲಿ (1)ನೆಯ ಭಾಗದಲ್ಲಿ ಗೋವಧೆಯ ನಿರೋಧಕ್ಕೆ ಸಂಬಂಧಪಟ್ಟ ಆಕ್ಟು ಮತ್ತು ಪ್ರಾಣಿವಧೆಯನ್ನು ನಿರೋಧಿಸುವುದಕ್ಕೆ ಸಂಬಂಧಪಟ್ಟ ಆಕ್ಟು—ಇವುಗಳ ಆಡಳಿತ ಕಾರ್ಯ ಪೋಲೀಸ್ ಇಲಾಖೆಗೆ ವಹಿಸಲ್ಪಟ್ಟಿದೆಯೆಂದು ಹೇಳಿದ್ದೀರಿ. ಇದಕ್ಕಾಗಿ ಪ್ರತ್ಯೇಕವಾಗಿ ಏನಾದರೂ ಪೋಲೀಸ್ ಸಿಬ್ಬಂದಿ ಇಟ್ಟಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಪೋಲೀಸ್ ಇಲಾಖೆಯವರು ಈ ಆಕ್ಟಿನ ಪ್ರಕಾರ ಕೇಸುಗಳನ್ನು ಹಾಕುತ್ತಾರೆ.

ಶ್ರೀ ಟಿ. ಹನುಮಯ್ಯ.—ಪ್ರಾಣಿವಧೆ ನಡೆಯುವುದು ಹಳ್ಳಿಗಾಡಿನಲ್ಲಿ ತಾನೆ ?

ಶ್ರೀ ಎಚ್. ಸಿದ್ದವೀರಪ್ಪ.—ಸಾಮಾನ್ಯವಾಗಿ ಹಳ್ಳಿಗಾಡಿನಲ್ಲೇ ಎಂದು ಹೇಳಬಹುದು.

ಶ್ರೀ ಟಿ. ಹನುಮಯ್ಯ.—ಹಳ್ಳಿಗಾಡಿನಲ್ಲಿರತಕ್ಕ ಪಂಚಾಯಿತಿ ಜೇರ್ಮನ್ನರಿಗೆ ಮತ್ತು ಪಟೇಲರಿಗೆ ಈ ಸಮಾಚಾರ ಗೊತ್ತಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಸಮಾಚಾರ ?

ಶ್ರೀ ಟಿ. ಹನುಮಯ್ಯ.—ಪ್ರಾಣಿವಧೆ ಮಾಡಕೂಡದೆಂಬ ವಿಚಾರ.

ಶ್ರೀ ಎಚ್. ಸಿದ್ದವೀರಪ್ಪ.—ಕಾನೂನು ಪ್ರಕಾರ every man is presumed to know what the law of the land is.

ಶ್ರೀ ಟಿ. ಹನುಮಯ್ಯ.—ಪಟೇಲ್ ಶಾನುಭೋಗರುಗಳಿಗೆ ಈ ಆಕ್ಟನ್ನು ಕಳುಹಿಸಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಹಾಗೆ ಯಾರಿಗೂ ಕಳುಹಿಸುವುದಿಲ್ಲ. ಗೆಜೆಟ್ಟಿನಲ್ಲಿ ಪ್ರಕಟಣೆ ಆಯ್ತು ಅಂದ ಮೇಲೆ ಪ್ರತಿಯೊಬ್ಬರೂ ಕಾನೂನು ತಿಳಿದುಕೊಂಡ ಹಾಗೆಯೇ ಭಾವಿಸುತ್ತೇವೆ. ಅದು ಜಾರಿಯಲ್ಲಿದೆ ಎಂದರ್ಥ.

ಶ್ರೀ ಟಿ. ಹನುಮಯ್ಯ.—ಪಟೇಲು ಶಾನುಭೋಗರುಗಳಿಗೆ ಈ ಆಕ್ಟಿನ ವಿಚಾರ ಏನೂ ಗೊತ್ತಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ. ಆ ರೀತಿ ನಮ್ಮ ಗಮನಕ್ಕೆ ಯಾವುದೂ ಬಂದಿಲ್ಲ.

ಶ್ರೀ ಟಿ. ಹನುಮಯ್ಯ.—ದೇವಿ ಜಾತ್ರೆ ನಡೆಸುವಾಗ ಪ್ರಾಣಿವಧೆ ಮಾಡಬೇಕಾದರೆ ಲೈಸನ್ಸ್ ತೆಗೆದು ಕೊಂಡು ತಾನೆ ಮಾಡಬೇಕು ?

ಶ್ರೀ ಎಚ್. ಸಿದ್ದವೀರಪ್ಪ.—ದೇವಿಜಾತ್ರೆ ಮಾಡುವುದಕ್ಕೆ ಲೈಸೆನ್ಸ್ ತೆಗೆದುಕೊಂಡೇ ಮಾಡಬೇಕೆಂದು ಕಾನೂನಿನಲ್ಲಿ ವಿಧಾಯಕವಾಗಿದೆ. ಮಾನ್ಯ ಸದಸ್ಯರು ಆಕ್ಟನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಲೈಸೆನ್ಸ್ ಇಲ್ಲದೆ ದೇವಿ ಜಾತ್ರೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಬಂದಾಗ ಕೇಸ್ ಹಾಕಿದ್ದೇವೆ.

ಶ್ರೀ ಟಿ. ಹನುಮಯ್ಯ.—ದೇವಸ್ಥಾನಗಳಿಗೆ ಪ್ರವೇಶಿಸುವುದಕ್ಕೆ ಅವಕಾಶವನ್ನು ಕಲ್ಪಿಸುವುದಕ್ಕೆ ಸಂಬಂಧಪಟ್ಟ ಆಕ್ಟು ಮುಜರಾಯಿ ಇಲಾಖೆಗೆ ಸೇರಿದೆಯೆಂದು ಹೇಳಿದ್ದೀರಿ. ಗ್ರಾಮಾಂತರಗಳಲ್ಲಿ ದೇವಸ್ಥಾನಗಳ ಪ್ರವೇಶಕ್ಕೆ ಸಂಬಂಧಪಟ್ಟ ಆಕ್ಟಿನ ಪ್ರಕಾರ ಹರಿಜನರು ಪ್ರವೇಶಮಾಡುವುದಕ್ಕೆ ಅವಕಾಶ ಕೊಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಯಾರಾದರೂ ಹಾಗೆ ಮಾಡಿದ್ದರೆ ಕಾನೂನು ಪ್ರಕಾರ ಅದು ತಪ್ಪಾಗುತ್ತದೆ.

ಶ್ರೀ ಟಿ. ಹನುಮಯ್ಯ.—ತಪ್ಪಾಗುತ್ತದೆಯೆಂಬುದು ಎಲ್ಲರಿಗೂ ಗೊತ್ತಿದೆ. ನಿಜವಾಗಿಯೂ ದೇವಸ್ಥಾನದ ಪ್ರವೇಶ ಅವರಿಗೆ ದೊರೆತಿದೆಯೇ ಎಂದು ಕೇಳುತ್ತಿದ್ದೇನೆ ?

ಶ್ರೀ ಎಚ್. ಸಿದ್ದವೀರಪ್ಪ.—ಪ್ರಯತ್ನಪಟ್ಟು ಯಾರಾದರೂ ಹಾಗೆ ಅಡ್ಡಿಬಂದರೆ ಕಾನೂನು ಪ್ರಕಾರ ಅವರು ಶಿಕ್ಷೆಗೆ ಗುರಿಯಾಗುತ್ತಾರೆ. ಈಗ ದೊಡ್ಡ ದೊಡ್ಡ ದೇವಸ್ಥಾನಗಳಿಗೂ ಕೂಡ ಹರಿಜನರು ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ನಂಜನಗೂಡು ದೇವಸ್ಥಾನ, ಚೇಲೂರು ದೇವಸ್ಥಾನ ಮುಂತಾದ ಕಡೆಗಳಲ್ಲಿ ಹರಿಜನರನ್ನು ಬಿಟ್ಟಿದ್ದಾರೆ.

ಶ್ರೀ ಟಿ. ಹನುಮಯ್ಯ.—ಶ್ರವಣಬೆಳಗೊಳದಲ್ಲಿ ಬಿಟ್ಟಿದ್ದಾರೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್ ಬೇಕು. ಶ್ರವಣಬೆಳಗೊಳದಲ್ಲಿ ಏನಾಗಿದೆ ಎಂಬುದನ್ನು ನೋಡಿ ಹೇಳಬೇಕು. As a matter of fact the law says that every one is entitled to go to a temple irrespective of his religion.

ಶ್ರೀ ಟಿ. ಹನುಮಯ್ಯ.—ಮಾನ್ಯಮಂತ್ರಿಗಳು ಪ್ರವಾಸ ಮಾಡುವಾಗ, ಗ್ರಾಮಾಂತರ ಪ್ರದೇಶಗಳಿಗೆ ಹೋದರೆ, ಅಲ್ಲಿನ ದೇವಸ್ಥಾನಗಳಿಗೆ ಹರಿಜನರನ್ನು ಕರೆದುಕೊಂಡು ಹೋಗಿ ಹೆಚ್ಚಿಗೆ ಪ್ರಚಾರ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಮಾಡೋಣ. ಅಧ್ಯೊಂದು ಒಳ್ಳೆಯ ಸಲಹೆ ನಾವು ಯಾವುದಾದರೂ ದೇವಸ್ಥಾನಕ್ಕೆ ಹೋಗುವಾಗ ನೀವೂ ಜೊತೆಯಲ್ಲಿದ್ದರೆ ನಿಮ್ಮನ್ನೂ ಜೊತೆಗೆ ಕರೆದುಕೊಂಡೇ ಹೋಗುತ್ತೇವೆ.

Sri G. DUGGAPPA.—Is there a separate department as such for the amelioration of depressed classes ?

Sri H. SIDDAVEERAPPA.—Under the Commissioner for Local Self-Government.

Sri G. DUGGAPPA.—A separate department is such.

Mr. SPEAKER.—The answer is so clear.

Sri H. SIDDAVEERAPPA.—Yes.

ಶ್ರೀ ಜಿ. ದುಗ್ಗಪ್ಪ.—ಸಿವಿಲ್ ಡಿಸೆಬಿಲಿಟೀಸ್ ಆಕ್ಟಿನ ಪ್ರಕಾರ ಎಷ್ಟು ಕೇಸುಗಳನ್ನು ಹಾಕಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಏಳು.

ಶ್ರೀ ಜಿ. ದುಗ್ಗಪ್ಪ.—ಈ ಆಕ್ಟಿನಲ್ಲಿ ಕೆಲವು ತಕ್ಸೀರುಗಳನ್ನು cognizable offence ಎಂದು ಪರಿಗಣಿಸಬೇಕೆಂದು ಹೇಳಿದ್ದ ಅಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು, ಆಕ್ಟಿನಲ್ಲೇ ಅದನ್ನು ಹೇಳಿದೆ. And I may also say under the Cow Slaughter Act, we have registered 164 cases so for

Sri G. DUGGAPPA.—For the just enforcement of this Act, is it not worthwhile entrusting this duty to the Police Department ?

Sri H. SIDDAVEERAPPA.—We will consider it.

ಶ್ರೀ ಪಿ. ಆರ್. ರಾಮಯ್ಯ.—Harijan Temple Entry Act ಜಾರಿಗೆ ಬಂದು ಮೂರು ವರ್ಷವಾಯಿತೇ ?

ಶ್ರೀ ಎಚ್. ಸಿದ್ದವೀರಪ್ಪ.—1948ರಲ್ಲಿ ಬಂತು.

ಶ್ರೀ ಪಿ. ಆರ್. ರಾಮಯ್ಯ.—ಕಳೆದ ಐದು ವರ್ಷಗಳಿಂದ ಯಾವುದಾದರೂ ಕೇಸು ದಾಖಲಾಗಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವ ಕೇಸೂ ದಾಖಲಾಗಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಇಂಥ ಆಕ್ಟು ಹೇಗೆ ಕೆಲಸ ಮಾಡುತ್ತಿದೆಯೆಂಬ ಬಗ್ಗೆ ತಾಲ್ಲೂಕ್ ಅಮಲ್ದಾರರಿಂದಾಗಲೆ ಆಥವಾ ಇನ್ಸ್‌ಪೆಕ್ಷನ್ ಅಧಿಕಾರಿಗಳಿಂದಾಗಲಿ ವರದಿಗಳನ್ನು ತರಿಸುತ್ತಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಕಾನೂನಿನ ಆಚರಣೆಗೆ ಕೈಹಾಕದೆ, ಸವರ್ಣ ಹಿಂದುಗಳೆನ್ನುವವರು

ಆಲ್ಲಲ್ಲೇ ಹೊಂದಿಕೊಂಡು reform ಮಾಡಿಕೊಂಡು ಹೋಗುತ್ತಿರುವುದರಿಂದ ಈ ಆಕ್ಟನ್ನು ಬಲವಂತವಾಗಿ ಒತ್ತಾಯಮಾಡಿ ಈ ನ್ಯೂನತೆಯನ್ನು ಹೋಗಲಾಡಿಸ ತಕ್ಕ ಅವಶ್ಯಕತೆ ಬಂದಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಅವಶ್ಯಕತೆ ಬಂದಿಲ್ಲ ಎಂದು ಹೇಳಿದಿರಿ. ಬರಾತ್ಕಾರದಿಂದ ತರುವುದೇ ಅಥವಾ ಸ್ವಂತ ಆಚರಣೆಯಿಂದ ತರುವುದೇ ಎಂಬ ಪ್ರಶ್ನೆಯಿಲ್ಲ. ಈಗ ಆಕ್ಟ್ ಇದೆಯಲ್ಲಾ, ಆ ಆಕ್ಟು ಯಾವ ರೀತಿ ಜಾರಿಗೆಬರುತ್ತಿದೆ ಎಂಬುದು ನೋಡ ಬೇಕಾದದ್ದು. Positive ಆಗಿ enforce ಮಾಡು ವುದಕ್ಕೆ ಸರ್ಕಾರದವರೇನಾದರೂ ಕಾರ್ಯಕ್ರಮ ಕೈಕೊಂಡಿದ್ದಾರೆಯೇ, Positive action ಕೈಕೊಂಡಿ ರುವ ಬಗ್ಗೆ ವರದಿಯೇನಾದರೂ ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—Probably the member knows in the annual report of the working of the department there is a column there.

Sri P. R. RAMAIYA.—I wish to bring to the notice of the Government that there is no such column.

Sri H. SIDDAVEERAPPA.—I will examine your suggestions and see that reports are received as to the actual working of this Act and how far it is going to remove the evil for which it is meant.

Sri P. R. RAMAIYA.—May I bring to the notice of the Government that in the interests of this very urgent reform, the Government should take more positive action in the matter?

Sri H. SIDDAVEERAPPA.—I agree with the Hon'ble Member.

ಶ್ರೀ ಆರ್. ಮುನಿಸ್ವಾಮಯ್ಯ.—ಮುಜರಾಯಿ ದೇವಸ್ಥಾನಗಳಲ್ಲಿ ಎಲ್ಲಿಯಾದರೂ ಹರಿಜನರನ್ನು ಧರ್ಮ ದರ್ಶಿಗಳಾಗಿ ನೇಮಿಸಿದ್ದೀರಾ?

Sri H. SIDDAVEERAPPA.—Notice please. I understand there is one Muzrai Temple with at least one Harijan Member as a Dharmadarshi.

ಶ್ರೀ ಎ. ಮುನಿಯಪ್ಪ.—ಶ್ರವಣಬೆಳಗೊಳದ ಗೋಮ ಟೇಶ್ವರಸ್ವಾಮಿ ದೇವಾಲಯ ಮುಜರಾಯಿ ಆಡಳಿತಕ್ಕೆ ಸೇರಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಸೇರಿದೆ.

ಶ್ರೀ ಎ. ಮುನಿಯಪ್ಪ.—ಅಲ್ಲಿಗೆ ಮಾನ್ಯ ಹರಿಜನ ಮಂತ್ರಿಗಳು ಬರಕೂಡದೆಂದು ಹೇಳಿರಲಿಲ್ಲವೇ?

(No answer.)

ಶ್ರೀ ಬಿ. ಟಿ. ಕೆಂಪರಾಜ್.—ಹರಿಜನರೊಬ್ಬರನ್ನು ಧರ್ಮದರ್ಶಿಗಳಾಗಿ ಒಂದು ದೇವಸ್ಥಾನಕ್ಕೆ ನೇಮಿಸಿ ರುವುದಾಗಿ ಹೇಳಿದಿರಿ. ಆ ದೇವಸ್ಥಾನಕ್ಕೆ ಪೂಜಾರಿ ಗಳು ಯಾರು?

ಶ್ರೀ ಎಚ್. ಸಿದ್ದವೀರಪ್ಪ.—ದೇವರನ್ನು ಯಾರು ಚೆನ್ನಾಗಿ ಭಕ್ತಿಯಿಂದ ಪೂಜಮಾಡುತ್ತಾರೋ ಅವರೇ ಪೂಜಾರಿಗಳು.

ಶ್ರೀ ಬಿ. ಟಿ. ಕೆಂಪರಾಜ್.—ಹರಿಜನರೊಬ್ಬರು ಧರ್ಮದರ್ಶಿಗಳಾಗಿದ್ದಾರೆಂದು ಹೇಳಿದಿರಿ. ಅಲ್ಲ ಧರ್ಮದರ್ಶಿಗಳೂ, ಪೂಜಾರಿಗಳೂ ಹರಿಜನರೇ?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಗ್ರಾಮಾಂತರಗಳ ಕಡೆ ಇನ್ನೂ ಈ ಆಕ್ಟು ಪ್ರಚಾರವಾಗದಿರುವ ವಿಷಯದಲ್ಲಿ ಪಬ್ಲೀಲ್ ಶ್ಯಾನುಭೋಗರಿಗೆ ತಿಳಿಸಿ ನೋಟೀಸ್ ಮೂಲಕ ಮತ್ತು ಟಾಂ ಟಾಂ ಮೂಲಕ ಜನರಿಗೆ ತಿಳಿಯ ಪಡಿಸುವುದಕ್ಕೆ ಸಾಧ್ಯವೇ?

Sri H. SIDDAVEERAPPA.—I will consider it. I have no objection to say and propagate that there is an Act like that in existence.

Mr. SPEAKER.—It is presumed that the law is in force. Unless there is some act in violation of that Act, no action need be taken.

Gratuity Scheme for the employees of Mysore Iron and Steel Works, Bhadravati.

Q.—26. Sri B. MADHAVACHAR (Bhadravati).—

Will the Government be pleased to state:—

(*a*) when the Gratuity Scheme for the employees of the Mysore Iron and Steel Works, Bhadravati, was recommended by the Board of Management of the Iron Works;

(*b*) whether the benefit of the scheme will be extended to all the employees who joined the works during the inception and who have retired in recent years?

A.—Sri H. SIDDAVEERAPPA (Minister for Home and Industries).—

(*a*) On 25th November 1950.

(*b*) The matter is under consideration.

ಶ್ರೀ ಬಿ. ಮಾಧವಾಚಾರ್.—ಈ ಕಂಪೆನಿಯಲ್ಲಿ 25 ವರ್ಷಕ್ಕಿಂತಲೂ ಮೇಲ್ಪಟ್ಟು ಸರ್ವಿಸ್‌ಮಾಡಿ ರಿಟೈರ್ ಆಗಿರುವವರ ಸಂಖ್ಯೆ ಎಷ್ಟು?

ಶ್ರೀ ಎಚ್. ಸಿದ್ದವೀರಪ್ಪ.—ನೋಟೀಸ್.